| Form No.4 (Civil) Deposition Sheets (R.P.No.57) |
| --- |

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 32/2020

ಫ್ರಾ.ಸಾ. 1 ಚಾ.ಸಾ. 1

| | | |
| --- | --- | --- |
| ಹೆಸರು | : | ಶ್ರೀಕಾಂತ |
| ತಂದೆಯ ಹೆಸರು | : | ಸಾಬಣ್ಣ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಫೋಟೊ ಗ್ರಾಫಿ ಕೆಲಸ |
| ವಾಸ | : | ನಾಯ್ಕಲ್ ಗ್ರಾಮ |

## ಪ್ರಮಾಣ ವಚನ ಭೋಧಿಸಿದ ದಿನಾಂಕ: 09-07-2025
## ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಮೃತ ಜಗನಾಥ ನನ್ನ ಅಣ್ಣ. 1ನೇ ಆರೋಪಿ ನನ್ನ ಅಣ್ಣನ ಹೆಂಡತಿ. 2ನೇ ಆರೋಪಿ ನನಗೆ ಪರಿಚಯ ಇಲ್ಲ. ಈ ಪ್ರಕರಣದಲ್ಲಿ ಯಾವ ದಿನಾಂಕದಂದು ಏನು ನಡೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಅಣ್ಣ ಜಗನಾಥ 2019 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ಅಣ್ಣ ಯಾವ ಕಾರಣಕ್ಕೆ ಮೃತಪಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಅವರ ಸಾವಿಗೆ ಯಾರು ಕಾರಣ ಎಂದು ಗೊತ್ತಿಲ್ಲ. ಸಾಕ್ಷಿಗೆ ಕಡತದಲ್ಲಿನ ದೂರನ್ನು ತೋರಿಸಿ ತಮ್ಮ ಸಹಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ಈ ಪ್ರಕರಣದಲ್ಲಿ ಯಾವುದೇ ದಿನದಂದು ಠಾಣೆಗೆ ಕರೆದಿರುವುದಿಲ್ಲ ಹಾಗೂ ಯಾವುದೇ ಪುರವಣಿ ಹೇಳಿಕೆಗಳನ್ನು ಪಡೆದಿರುವುದಿಲ್ಲ.

( ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ

ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು. )

<u>ಪಾಟೀ ಸವಾಲು ಸರಕಾರಿ ಅಭಿಯೋಜಕರಿಂದ</u>

2. ದರ್ಮಪೂರ ಗ್ರಾಮ ಸೀಮಾಂತರ ರಾಜ್ಯ ಹೆದ್ದಾರಿ ಸಂಖ್ಯೆ 16 ರ ತಡೆಗೊಡೆ ಪಕ್ಕದ ಗುಡ್ಡಗಾಡು ಪ್ರದೇಶದಲ್ಲಿ ದಿಃ 22.02.2019 ರಂದು ರಾತ್ರಿ 10-00 ಗಂಟೆಗೆ ಆರೋಪಿತರಿಬ್ಬರೂ ಏಕೋದೇಶದಿಂದ ಮೃತ ಜಗನಾಥನಿಗೆ ಕೊಲೆ ಮಾಡುವ ಉದ್ದೇಶದಿಂದ 1 ನೇ ಆರೋಪಿತಳು 2 ನೇ ಆರೋಪಿಗೆ ಫೋನ್ ಮಾಡಿ ಮನೆಗೆ ಕರೆಯಿಸಿಕೊಂಡು ಯಾದಗಿರಿ ಚಿರಜೀವಿ ನಗರದ ಏರಿಯಾದ ಮನೆ ನಂ.5-5-337/2 ಸಿ ಮನೆಯಲ್ಲಿ ಕುಡಿದು ಮಲಗಿದ್ದ ಜಗನಾಥನಿಗೆ ತಲೆದಿಂಬಿನ ಸಹಾಯದಿಂದ ಉಸಿರುಗಟ್ಟಿಸಿ ಕೊಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕೊಲೆ ಮಾಡಿರುವ ಬಗ್ಗೆ ಯಾರಿಗೂ ಅನುಮಾನ ಬರದಂತೆ ಸಾಕ್ಷಿ ನಾಶ ಮಾಡುವ ಉದ್ದೇಶದಿಂದ ಮೃತ ಜಗನಾಥನ ಹೆಣವನ್ನು 2 ನೇ ಆರೋಪಿ ಖರೀದಿ ಮಾಡಿದ ಕಾರ ನಂ. ಕೆಎ-33 ಎಮ್-1830 ವಾಹನದಲ್ಲಿ ಹಾಕಿಕೊಂಡು ಗುರುಮಠಕಲ್ ಸಮೀಪದ ದರ್ಮಪೂರ ಘಾಟ ತೀರು ರಸ್ತೆಯಲ್ಲಿ ಬಿಸಾಡಿ ಸಾಕ್ಷಿ ನಾಶಪಡಿಸಿರುತ್ತಾರೆ ಎಂದರೆ ಸರಿಯಲ್ಲ.

3. ಆರೋಪಿತರು ಏಕೋದ್ದೇಶದಿಂದ 1 ನೇ ಆರೋಪಿತಳು ದಿಃ 22.02.2019 ರಂದು ತನ್ನ ಗಂಡ ಕಾಣೆಯಾಗಿದ್ದಾನೆ ಬೀಗರು ನೆಂಟರಲ್ಲಿ ಸ್ನೇಹಿತರಿಗೆ ವಿಚಾರಿಸಿದರೂ ಇಲ್ಲಿಯವರೆಗೆ ಸಿಕ್ಕಿರುವುದಿಲ್ಲ ಕಾರಣ ಪತ್ತೆ ಮಾಡಿಕೊಡಿ ಎಂದು ಠಾಣಾ ಕರ್ತವ್ಯ ನಿರ್ವಹಿಸುತ್ತಿರುವ ಚಾಸಾ-27 ಮಂಜೂಳಾ ಪಿಎಸಐ ಅವರಿಗೆ ಕಾಣೆ ಪ್ರಕರಣದ ಬಗ್ಗೆ ಸುಳ್ಳು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಈಗ ವಿವವರವಾಗಿ ಓದಿ ಹೇಳಿದ ನಿ.ಪಿ.1 ರಂತೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ದಿಃ 05.01.2020 ರಂದು ಈಗ ವಿವರವಾಗಿ ಓದಿ ಹೇಳಿದಂತೆ ಪೊಲೀಸರ ಮುಂದೆ ಫಿರ್ಯಾದಿ ಪುರವಣಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪುರವಣಿ ಹೇಳಿಕೆಯನ್ನು ನಿ.ಪಿ.2 ಎಂದು ಗುರುತಿಸಲಾಯಿತು. ದಿಃ 03.03.2019 ರಂದು ಈಗ ವಿವರವಾಗಿ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.3 ಎಂದು ಗುರುತಿಸಲಾಯಿತು. ಮೃತ ಜಗನಾಥನ ಸಾವಿಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರೆ ಕಾರಣ ಎಂದು ಸೂಚಿಸುವದು ಸರಿಯಲ್ಲ.

4. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು 1 ನೇ  ಆರೋಪಿತರ ಪರವಾಗಿ ಶ್ರೀ. ಎಮ್.ಎಮ್.ಇ.  ವಕೀಲರಿಂದ</u>

-ಇಲ್ಲ.

<u>ಪಾಟೀ ಸವಾಲು 2 ನೇ  ಆರೋಪಿತರ ಪರವಾಗಿ ಶ್ರೀ. ಬಿ.ಬಿ.ಕೆ .  ವಕೀಲರಿಂದ</u>

-ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

Form No.4 (Civil)
Deposition
Sheets
(R.P.No.57)

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 32/2020

ಪ್ರಾ.ಸಾ. 2 ಚಾ.ಸಾ. 3

| | | |
|---|---|---|
| ಹೆಸರು | : | ಮಲ್ಲಿಕಾರ್ಜುನ |
| ತಂದೆಯ ಹೆಸರು | : | ಸಾಬಣ್ಣ ದೊಡ್ಮನಿ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಬೆಳಗೇರಾ |

## ಪ್ರಮಾಣ ವಚನ ಭೋಧಿಸಿದ ದಿನಾಂಕ: 09-07-2025
## ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಚಾಸಾ-2 ಸಾಬರೆಡ್ಡಿ ಗೊತ್ತಿಲ್ಲ. ಈ ಪ್ರಕರಣದ 1 ಮತ್ತು 2 ನೇ ಆರೋಪಿತರು ಗೊತ್ತಿಲ್ಲ. ಪೊಲೀಸರು ಯಾವುದೇ ದಿನದಂದು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಯಾವುದೇ ಪಂಚನಾಮೆಗಳನ್ನು ಮಾಡಿ, ಯಾವುದೇ ಸ್ಥಳ ತೋರಿಸಿ ಯಾವುದೇ ವಸ್ತುಗಳನ್ನು ಪರಿಶೀಲಿಸಿ ಜಪ್ತಿ ಪಡಿಸಿಕೊಂಡು ಪಂಚನಾಮೆಗಳನ್ನು ಮಾಡಿ ಸಹಿ ಪಡೆದಿರುವುದಿಲ್ಲ. ಸಾಕ್ಷಿಗೆ ಒಂದು ತಲೆದಿಂಬು ಜಪ್ತಿ ಪಂಚನಾಮೆ ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿ.ಪಿ.4 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ನಿ.ಪಿ.4 ಸಮಯದಲ್ಲಿ ತೆಗೆದ 2 ಭಾವಚಿತ್ರಗಳನ್ನು ತೋರಿಸುತ್ತಿದ್ದು ಅದರಲ್ಲಿ ತಾನು ಇರುವದಾಗಿ ಗುರುತಿಸಿದ್ದು ಸದರಿ ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ ಅವುಗಳನ್ನು ನಿ.ಪಿ.5 ಮತ್ತು 6 ಎಂದು ಗುರುತಿಸಲಾಯಿತು.

2. ಸಾಕ್ಷಿಗೆ ಕೃತ್ಯಕ್ಕೆ ಬಳಸಿದ ಕಾರು ಜಪ್ತಿ ಪಂಚನಾಮೆ ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿ.ಪಿ.7 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ನಿ.ಪಿ.7 ಸಮಯದಲ್ಲಿ ತೆಗೆದ 2 ಭಾವಚಿತ್ರಗಳನ್ನು ತೋರಿಸುತ್ತಿದ್ದು ಅದರಲ್ಲಿ ತಾನು ಇರುವದಾಗಿ ಗುರುತಿಸಿದ್ದು ಸದರಿ ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ

ತೆಗೆದಿದ್ದಾರೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ ಅವುಗಳನ್ನು ನಿ.ಪಿ.8 ಮತ್ತು 9 ಎಂದು ಗುರುತಿಸಲಾಯಿತು.

3. ಸಾಕ್ಷಿಗೆ ಮೃತ ಜಗನಾಥನ ಮೃತ ದೇಹ ಬಿಸಾಡಿದ ಸ್ಥಳ ಪಂಚನಾಮೆ ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿ.ಪಿ.10 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.10(ಎ) ಎಂದು ಗುರುತಿಸಲಾಯಿತು. ನಿ.ಪಿ.10 ರ ಸಮಯದಲ್ಲಿ ತಯರಿಸಿದ ಒಂದು ಕಚ್ಚಾ ನಕಾಶೆಯನ್ನು ತೋರಿಸಿ ಸಹಿ ಗುರುತಿಸಿದ್ದು ಅದನ್ನು ನಿ.ಪಿ.11 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.11(ಎ) ಎಂದು ಗುರುತಿಸಲಾಯಿತು. ನಿ.ಪಿ.10 ಸಮಯದಲ್ಲಿ ತೆಗೆದ 6 ಭಾವಚಿತ್ರಗಳನ್ನು ತೋರಿಸುತ್ತಿದ್ದು ಅದರಲ್ಲಿ ತಾನು ಇರುವದಾಗಿ ಗುರುತಿಸಿದ್ದು ಸದರಿ ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ ಅವುಗಳನ್ನು ನಿ.ಪಿ.12 ರಿಂದ 17 ಎಂದು ಗುರುತಿಸಲಾಯಿತು.

4. ಸಾಕ್ಷಿಗೆ ಮೃತ ಜಗನಾಥನಿಗೆ ಕೊಲೆ ಮಾಡಿದ ಸ್ಥಳ ಪಂಚನಾಮೆ ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿ.ಪಿ.18 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.18(ಎ) ಎಂದು ಗುರುತಿಸಲಾಯಿತು. ನಿ.ಪಿ.18 ರ ಸಮಯದಲ್ಲಿ ತಯರಿಸಿದ ಒಂದು ಕಚ್ಚಾ ನಕಾಶೆಯನ್ನು ತೋರಿಸಿ ಸಹಿ ಗುರುತಿಸಿದ್ದು ಅದನ್ನು ನಿ.ಪಿ.19 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.19(ಎ) ಎಂದು ಗುರುತಿಸಲಾಯಿತು. ನಿ.ಪಿ.18 ಸಮಯದಲ್ಲಿ ತೆಗೆದ 6 ಭಾವಚಿತ್ರಗಳನ್ನು ತೋರಿಸುತ್ತಿದ್ದು ಅದರಲ್ಲಿ ತಾನು ಇರುವದಾಗಿ ಗುರುತಿಸಿದ್ದು ಸದರಿ ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ ಅವುಗಳನ್ನು ನಿ.ಪಿ.20 ರಿಂದ 25 ಎಂದು ಗುರುತಿಸಲಾಯಿತು. ನಿ.ಪಿ.4, 7, 10, 11, 18, 19 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುವುದಿಲ್ಲ.

( ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು. )

**<u>ಪಾಟೀ ಸವಾಲು ಸರಕಾರಿ ಅಭಿಯೋಜಕರಿಂದ</u>**

5. ದಿಃ 04.01.2020 ರಂದು ಬೆಳಿಗ್ಗೆ 8-30 ರಿಂದ 9-00 ಗಂಟೆಯ ವರೆಗೆ ನನ್ನನ್ನು ಹಾಗೂ ಸಾಬರೆಡ್ಡಿ ಈತನನ್ನು ಸುರಪೂರ ನಗರದ ಅಂಬೇಡ್ಕರ ಓಣಿಯಲ್ಲಿ ಬರಮಾಡಿಕೊಂಡು 1ನೇ ಆರೋಪಿ ಈಕೆಯು ಬಟ್ಟೆಯಿಂದ ಹೊಲೆದ ಕೃತ್ಯಕ್ಕೆ ಬಳಸಿದ ಒಂದು ತಲೆದಿಂಬನ್ನು ಹಾಜರಪಡಿಸಿದ ಮೇರೆಗೆ ಅದನ್ನು ಈಗ ವಿವರವಾಗಿ ಓದಿ ಹೇಳಿದ ನಿ.ಪಿ.4 ರಂತೆ ಜಪ್ತಿ ಪಂಚನಾಮೆಯನ್ನು ಮಾಡಿ ಆ ಕಾಲಕ್ಕೆ ನಿ.ಪಿ.5 ಮತ್ತು 6 ರಂತೆ ಭಾವಚಿತ್ರಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ.

6. ದಿಃ 04.01.2020 ರಂದು ಸಾಯಂಕಾಲ 6-10 ರಿಂದ 7-00 ಗಂಟೆಯ ವರೆಗೆ ನನ್ನನ್ನು ಹಾಗೂ ಸಾಬರೆಡ್ಡಿ ಈತನನ್ನು 2ನೇ ಆರೋಪಿ ಶಶಿಕುಮಾರ ಈತನ ಮನೆಯ ಹಿಂದುಗಡೆಯ ಸಾರ್ವಜನಿಕ ಸಿ.ಸಿ. ರಸ್ತೆಯಲ್ಲಿ ನಿಲ್ಲಿಸಿದ ಒಂದು ಬಿಳಿ ಬಣ್ಣದ ಕಾರ ನಂ. ಕೆಎ-33 ಎಮ್-1830 ಹಾಜರಪಡಿಸಿದ ಮೇರೆಗೆ ಅದನ್ನು ಈಗ ವಿವರವಾಗಿ ಓದಿ ಹೇಳಿದ ನಿ.ಪಿ.7 ರಂತೆ ಜಪ್ತಿ ಪಂಚನಾಮೆಯನ್ನು ಮಾಡಿ ಆ ಕಾಲಕ್ಕೆ ನಿ.ಪಿ.8 ಮತ್ತು 9 ರಂತೆ ಭಾವಚಿತ್ರಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ.

7. ದಿಃ 04.01.2020 ರಂದು ಸಾಯಂಕಾಲ 4-10 ರಿಂದ 5-15 ಗಂಟೆಯ ವರೆಗೆ ನನ್ನನ್ನು ಹಾಗೂ ಸಾಬರೆಡ್ಡಿ ಈತನನ್ನು ಸಿಂದಗಿ -ಕೊಡಾಂಗಲ್ ರಾಜ್ಯ ಹೆದ್ದಾರಿ ಸಂಖ್ಯೆ16 ಮುಖ್ಯ ರಸ್ತೆಯ ದರ್ಮಪೂರ ಗ್ರಾಮದ ಸೀಮಾಂತರದ ಗುಡ್ಡಗಾಡು ಪ್ರದೇಶ ರಸ್ತೆ ತಡೆಗೋಡೆ ಪಕ್ಕದಲ್ಲಿ 1ನೇ ಆರೋಪಿ ಅಶ್ವಿನಿ ಈಕೆಯು ಮೃತ ದೇಹ ಬಿಸಾಡಿದ ಸ್ಥಳದ ಪಂಚನಾಮೆಯನ್ನು ಈಗ ವಿವರವಾಗಿ ಓದಿ ಹೇಳಿದ ನಿ.ಪಿ.10 ರಂತೆ ಪಂಚನಾಮೆಯನ್ನು ಮಾಡಿ ಆ ಕಾಲಕ್ಕೆ ನಿ.ಪಿ.11 ರಂತೆ ನಕ್ಷೆ ಹಾಗೂ ನಿ.ಪಿ.12 ರಿಂದ 17 ರಂತೆ ಭಾವಚಿತ್ರಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ.

8. ದಿಃ 04.01.2020 ರಂದು ಮಧ್ಯಾಹ್ನ 2-00 ರಿಂದ 3-00 ಗಂಟೆಯ ವರೆಗೆ ನನ್ನನ್ನು ಹಾಗೂ ಸಾಬರೆಡ್ಡಿ ಈತನನ್ನು ಯಾದಗಿರಿ ಚಿರಂಜೀವಿ ನಗರದ ಅನಂತರಕುಮಾರ ಹೊಸ್ಮನಿ ಇವರ ಮನೆ ನಂ. 5-5-337/2 ಸಿ ರಲ್ಲಿ ಬರಮಾಡಿಕೊಂಡು 1ನೇ ಆರೋಪಿ ಅಶ್ವಿನಿ ಈಕೆಯು ತೋರಿಸಿದ ಮೇರೆಗೆ ಮೃತನಿಗೆ ಕೊಲೆ ಮಾಡಿದ ಸ್ಥಳದ ಪಂಚನಾಮೆಯನ್ನು ಈಗ ವಿವರವಾಗಿ ಓದಿ ಹೇಳಿದ ನಿ.ಪಿ.18 ರಂತೆ ಪಂಚನಾಮೆಯನ್ನು ಮಾಡಿ ಆ ಕಾಲಕ್ಕೆ ನಿ.ಪಿ.19 ರಂತೆ ನಕ್ಷೆ ಹಾಗೂ ನಿ.ಪಿ.20 ರಿಂದ 25 ರಂತೆ ಭಾವಚಿತ್ರಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ.

9. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು 1 ನೇ  ಆರೋಪಿತರ ಪರವಾಗಿ,ಶ್ರೀ. ಎಮ್.ಎಮ್.ಇ.  ವಕೀಲರಿಂದ

-ಇಲ್ಲ.

ಪಾಟೀ ಸವಾಲು 2 ನೇ  ಆರೋಪಿತರ ಪರವಾಗಿ,ಶ್ರೀ. ಬಿ.ಬಿ.ಕೆ .  ವಕೀಲರಿಂದ

-ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.